# ತುಮಕೂರು ವಿಶ್ವವಿದ್ಯಾನಿಲಯ

ಸ್ನಾತಕೋತ್ತರ ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ವಿಶ್ವವಿದ್ಯಾನಿಲಯ ಆವರಣ
ಬಿ. ಹೆಚ್.ರಸ್ತೆ ತುಮಕೂರು– 572103

ಸಂಖ್ಯೆ:ತು.ವಿ/ಪ್ರಾ.ವಿಭಾಗ/2017–18/147 ದಿನಾಂಕ: 05–01–2018

ದರಪಟ್ಟಿ ಆಹ್ವಾನ (ವಿ.ವಿ.ವೆಬ್‌ಸೈಟ್‌ನಲ್ಲಿ)

**ವಿಷಯ:** ಊಟದ ಸರಬರಾಜಿಗಾಗಿ ದರಪಟ್ಟಿ ಆಹ್ವಾನಿಸುತ್ತಿರುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸ್ನಾತಕೋತ್ತರ ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ದಿನಾಂಕ: 31–01–2018 ರಂದು "ಎಮರ್ಜಿಂಗ್ ಟ್ರೆಂಡ್ಸ್ ಅಂಡ್ ಅಪ್ರೋಚಸ್ ಇನ್ ಜುವಾಲಾಜಿಕಲ್ ಸೈನ್ಸ್ (Emerging Trends and Approaches in Zoological Science)" ಎಂಬ ವಿಷಯದ ಬಗ್ಗೆ ಒಂದು ದಿನದ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲು ತೀರ್ಮಾನಿಸಿದ್ದು, ಸದರಿ ಕಾರ್ಯಕ್ರಮಕ್ಕೆ ತಿಂಡಿ–ಊಟದ ಸರಬರಾಜಿಗಾಗಿ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ನೊಂದಾಯಿತ ಸಂಸ್ಥೆಗಳಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

| Sl.No | Particulars | Quantity to be required | Rate to be quoted (Per each) |
|---|---|---|---|
| 01 | ಬೆಳಗ್ಗೆ–ಕಾಫೀ/ಟೀ<br>ಸಂಜೆ– ಕಾಫೀ/ಟೀ<br>ಮಾಸಾಲಾವಡೆ | 200<br>200<br>200 | |
| 02 | ಬೆಳಗ್ಗೆ–ತಿಂಡಿ<br>ಉಪ್ಪಿಟ್ಟು–ಕೇಸರಿಬಾತ್ | 30 (Plates) | |
| 03 | ಅತಿಥಿ ಊಟ– ಕೋಸಂಬರಿ, ಚಪಾತಿ, ಪಲ್ಯ, ಅನ್ನ ಸಾಂಬಾರ್, ಮೊಸರು, ಹಪ್ಪಳ. ಉಪ್ಪಿನ ಕಾಯಿ. | 30 (Plates) | |
| 04 | ಸಾಮಾನ್ಯ ಊಟ–ಪಲಾವ್, ಮೊಸರು ಬಜ್ಜಿ, ಮೊಸರನ್ನ, ಬೋಂಡಾ, ಜಿಲೇಬಿ, ಕುಡಿಯುವ ನೀರು. | 350–400 | |

**ಷರತ್ತು ಮತ್ತು ನಿಬಂಧನೆಗಳು:**

1. ಲಕೋಟೆಯ ಮೇಲೆ ಊಟದ ಸರಬರಾಜಿಗಾಗಿ ದರಪಟ್ಟಿ ಎಂದು ಸ್ಪಷ್ಟವಾಗಿ ನಮೂದಿಸಬೇಕು.
2. ಸರಬರಾಜುದಾರರ GST ಮತ್ತು Pan Card ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು.
3. ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 20–01–2018 ಸಮಯ 1.00 ಗಂಟೆಯೊಳಗೆ ಸಲ್ಲಿಸತಕ್ಕದ್ದು.
4. ದರಪಟ್ಟಿಯನ್ನು ದಿನಾಂಕ: 20–01–2018 ರಂದು ಸಮಯ 2.00 ಕ್ಕೆ ತೆರೆಯಲಾಗುವುದು.
5. ದರಪಟ್ಟಿಯ ವಿವರದಲ್ಲಿರುವಂತೆ ಊಟವನ್ನು ವಿಶ್ವವಿದ್ಯಾನಿಲಯಕ್ಕೆ ಸರಬರಾಜು ಮಾಡಿದ ನಂತರ ಹುಂಡಿಯನ್ನು ಸಲ್ಲಿಸುವುದು.
6. ಯಾವುದೇ ರೀತಿಯ ಮುಂಗಡ ಹಣ ಪಾವತಿಗೆ ಅವಕಾಶವಿರುವುದಿಲ್ಲ.
7. ಉತ್ತಮವಾದ ಆಹಾರವನ್ನು ಸರಬರಾಜು ಮಾಡದಿದ್ದಲ್ಲಿ ಯಾವುದೇ ಕಾರಣ ನೀಡದೆ ಹುಂಡಿಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.

8. ದರಪಟ್ಟಿಗಳನ್ನು ಡಾ. ಆಸಿಯಾ ನೂಜಹತ್ ಎಫ್.ಬಿ. ಸಂಯೋಜಕರು ಹಾಗೂ ಸಹಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-572103 ಇವರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಲಯವು ಜವಬ್ದಾರಿಯಾಗುವುದಿಲ್ಲ.
9. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ ಡಾ. ಆಸಿಯಾ ನೂಜಹತ್ ಎಫ್.ಬಿ. ಸಂಯೋಜಕರು ಹಾಗೂ ಸಹಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-572103 (**Ph. 9844029441**) ಇವರನ್ನು ಸಂಪರ್ಕಿಸಬಹುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

Asiya

(ಡಾ. ಆಸಿಯಾ ನೂಜಹತ್ ಎಫ್.ಬಿ.)

ಡಾ ಆಸಿಯಾ ನೂಜಹತ್ ಎಫ್ ಬಿ.
ಸಂಯೋಜಕರು ಮತ್ತು ಸಹಪ್ರಾಧ್ಯಾಪಕರು
ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು-572103

ಪ್ರತಿಗಳು:

1. ಮಾನ್ಯ ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಕಛೇರಿ ಪ್ರತಿ.